# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 841
2. ಸದಸ್ಯರ ಹೆಸರು : ಶ್ರೀ. ಕಿಶೋರ್ ಕುಮಾರ್ ಪುತ್ತೂರು,
3. ಉತ್ತರಿಸಬೇಕಾದ ದಿನಾಂಕ : 13.03.2025.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಉಡುಪಿ ಜಿಲ್ಲೆಯ ಬೈಂದೂರು ತಾಲೂಕಿನ ಹೇರಂಜಾಲು ಗ್ರಾಮದಲ್ಲಿ ಏತ ನೀರಾವರಿ ಕಾಮಗಾರಿಗೆ ಅನುಮೋದನೆ ನೀಡಲಾಗಿದೆಯೇ; ನೀಡಿದ್ದರೆ ಕಾಮಗಾರಿ ಯಾವ ಹಂತದಲ್ಲಿದೆ; | ಉಡುಪಿ ಜಿಲ್ಲೆ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗುಡಿ ಮಹಾಲಿಂಗೇಶ್ವರ ಏತ ನೀರಾವರಿ ಯೋಜನೆ ಕಾಮಗಾರಿಯು ರೂ.72.00 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆಗೊಂಡಿರುತ್ತದೆ.<br><br>ಸದರಿ ಯೋಜನೆಯಲ್ಲಿ ಎರಡು ಕೆರೆಗಳ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿದ್ದು ಜಾಕ್‌ವೆಲ್ ಕಂ ಪಂಪ್ ಹೌಸ್, ರೈಸಿಂಗ್ ಮೈನ್, ನದಿದಂಡೆ ಸಂರಕ್ಷಣೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ವಿತರಣಾ ಪೈಪುಗಳನ್ನು ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |
| ಆ. | ಯೋಜನೆಗೆ ಟೆಂಡರ್ ಕರೆಯಲಾಗಿತ್ತೇ; ಟೆಂಡರ್‌ನಲ್ಲಿ ಭಾಗವಹಿಸಿದ್ದ ಸಂಸ್ಥೆಗಳು ನಮೂದಿಸಿದ್ದ ಟೆಂಡರ್ ಮೊತ್ತ ಎಷ್ಟು; ಯಾವ ಸಂಸ್ಥೆಗೆ/ಗುತ್ತಿಗೆದಾರರಿಗೆ ಟೆಂಡರ್ ನೀಡಲಾಗಿದೆ; ಅವರು ನಮೂದಿಸಿದ ಟೆಂಡರ್ ಮೊತ್ತವೆಷ್ಟು; | ಸದರಿ ಯೋಜನೆಯನ್ನು ಟರ್ನ್ ಕೀ ಆಧಾರದ ಮೇಲೆ ಕೈಗೊಳ್ಳಲು ಮಂಜೂರಾದ ಅಂದಾಜು ಪಟ್ಟಿಯಂತೆ ಜಿ.ಎಸ್.ಟಿ. ಹೊರತುಪಡಿಸಿ ರೂ. 56,08,09,289.00 ಗಳಿಗೆ ಟೆಂಡರ್ ಕರೆಯಲಾಗಿರುತ್ತದೆ.<br><br>ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು,<br>1. ಶ್ರೀ ಜಯಶೀಲ ನಾರಾಯಣ ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು, ಬೆಳಗಾವಿ ಇವರು ಜಿ.ಎಸ್.ಟಿ. ಹೊರತುಪಡಿಸಿ ರೂ. 65,75,38,038.00 ಗಳ ಮೊತ್ತವನ್ನು ನಮೂದಿಸಿರುತ್ತಾರೆ.<br>2. ಮೆ: ಅಮೃತ ಕನ್ಸಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಪ್ರೊ: ಶ್ರೀ ಪಿ. ವೆಂಕಟೇಶ್ವರ ರಾವ್, ಕ್ಲಾಸ್-1 ಗುತ್ತಿಗೆದಾರರು, ಬೆಂಗಳೂರು ಇವರು ಜಿ.ಎಸ್.ಟಿ. ಹೊರತು ಪಡಿಸಿ ರೂ. 70,76,89,240.00 ಗಳ ಮೊತ್ತವನ್ನು ನಮೂದಿಸಿರುತ್ತಾರೆ.<br>ಸದರಿ ಕಾಮಗಾರಿಯ ಟೆಂಡರ್‌ಗೆ ಶ್ರೀ.ಜಯಶೀಲ ಎನ್ ಶೆಟ್ಟಿ, ಕ್ಲಾಸ್-1 ಗುತ್ತಿಗೆದಾರರು, ಬೆಳಗಾವಿ ಇವರಿಗೆ ಟೆಂಡರ್ (Turn-Key Tender) ಅನ್ನು ಪರಿಷ್ಕೃತ ದರಗಳ ಮೇಲೆ ಶೇ 4.90ರಷ್ಟು ಹೆಚ್ಚಿನ ಮೊತ್ತಕ್ಕೆ ಅಂದರೆ ರೂ.58,82,88,944/-ಗಳಿಗೆ (ಜಿ.ಎಸ್ .ಟಿ. ಹೊರತುಪಡಿಸಿ) ಅನುಮೋದನೆ ನೀಡಲಾಗಿರುತ್ತದೆ. |
| ಇ. | ಸದರಿ ಕಾಮಗಾರಿ ಅವೈಜ್ಞಾನಿಕವಾಗಿದೆ ಎಂದು ಗ್ರಾಮಸ್ಥರು ಯೋಜನೆಗೆ ವಿರೋಧ ವ್ಯಕ್ತ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗ್ರಾಮಸ್ಥರ ವಿರೋಧಕ್ಕೆ ಕಾರಣಗಳೇನು; | ಸದರಿ ಕಾಮಗಾರಿಯ ಸರ್ವೆಕಾರ್ಯವನ್ನು ಕೈಗೊಳ್ಳುವ ಸಂದರ್ಭದಲ್ಲಿ ಸಾರ್ವಜನಿಕರಿಂದ ಮಾಹಿತಿಗಳನ್ನು ಪಡೆದು ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿರುತ್ತದೆ.<br><br>ಮುಂದುವರೆದು, ಸದರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೇರಂಜಾಲು ಗ್ರಾಮ ಪಂಚಾಯತ್‌ನವರು ಕಾಮಗಾರಿಯ ಬಗ್ಗೆ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡುವಂತೆ ಹಾಗೂ ಯೋಜನಾ ವರದಿ ಮತ್ತು ನಕಾಶೆಯನ್ನು ಒದಗಿಸುವಂತೆ ಪತ್ರ ಸಂ: 94/2024-25 ದಿ: 08.01.2025 ರನ್ವಯ ಕೋರಿರುತ್ತಾರೆ. ಅದರಂತೆ ಸಹಾಯಕ |

| | | |
|---|---|---|
| | | ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ ಉಡುಪಿ ಇವರು ಪತ್ರ ಸಂ: 2025/101 ದಿ: 18.01.2025 ರನ್ವಯ ಮಾಹಿತಿಯನ್ನು ಒದಗಿಸಿ, ದಿ: 23.01.2025 ರಂದು ನಡೆದ ಹೆರಂಜಾಲು ಭಾಗದ ಗ್ರಾಮಸ್ಥರ ಸಭೆಗೆ ಹಾಜರಾಗಿ ಯೋಜನೆಯ ಮಾಹಿತಿಯನ್ನು ನೀಡಲಾಗಿರುತ್ತದೆ.<br><br>ತದನಂತರ ಹೆರಂಜಾಲು ಗ್ರಾಮದಲ್ಲಿ ದಿ:04.02.2025 ರಂದು ಯೋಜನೆಗೆ ಹಾಗೂ ಕಿಂಡಿ ಅಣೆಕಟ್ಟೆಗೆ ಸಂಬಂಧಿಸಿದ ಎಲ್ಲಾ ಗ್ರಾಮದ ಗ್ರಾಮಸ್ಥರ ಮತ್ತು ರೈತರ ಸಭೆಗೆ ಹಾಜರಾಗುವಂತೆ ತಿಳಿಸಿದ್ದು, ಸದರಿ ಸಭೆಗೆ ಇಲಾಖಾ ಅಧಿಕಾರಿಗಳು ಹಾಜರಾಗಿ ಯೋಜನೆಗೆ ಸಂಬಂಧಪಟ್ಟ ಸಂಪೂರ್ಣ ಮಾಹಿತಿಯನ್ನು ನೀಡಲಾಗಿರುತ್ತದೆ . |
| ಈ. | ಗ್ರಾಮಸ್ಥರ ವಿರೋಧದ ಹಿನ್ನಲೆಯಲ್ಲಿ ಸದರಿ ಯೋಜನೆಯ ಕುರಿತು ಸರ್ಕಾರದ ನಿಲುವೇನು? | ಈ ವಿಷಯದ ಬಗ್ಗೆ ದಿ: 04.02.2025 ರಂದು ನಡೆದ ಗ್ರಾಮಸ್ಥರ ಸಭೆಯಲ್ಲಿ ಮನವರಿಕೆ ಮಾಡಲಾಗಿರುತ್ತದೆ.<br><br>ಕಾಮಗಾರಿಯನ್ನು ಪೂರ್ಣಗೊಳಿಸಿ ಯೋಜಿತ ಪ್ರದೇಶಕ್ಕೆ ನೀರೊದಗಿಸಲಾಗುವುದು, |

ಕಡತ ಸಂಖ್ಯೆ: MID/22/LCQ/2025

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ
ಸಚಿವರು.